## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

## ಸಿಸಿ ನಂ.633/2015

ಫಿರ್ಯಾದಿ: ಕರ್ನಾಟಕ ಸರಕಾರ ಪರ: ಸೇಡಂ ಪೊಲೀಸ್ ಠಾಣೆ

-:: ವಿರುದ್ಧ ::-

ಆರೋಪಿ: ಆನಂದ ತಂದೆ ರಾಮು ಬೈಲಪತ್ತರ,
ವ: 33 ವರ್ಷ, ಉ: ವ್ಯಾಪಾರ,
ಸಾ: ಶ್ರೀನಿವಾಸ ಸರಡಗಿ, ಹಾ:ವ: ಭವಾನಿ ನಗರ, ಸೇಡಂ.

----

## ದೋಷಾರೋಪಣೆ

ನಾನು ಶ್ರೀ ಸುನೀಲ್ ಎಸ್. ತಳವಾರ, ಬಿ.ಎ.ಎಲ್.ಎಲ್.ಬಿ., (ಸ್ಪೆಷಲ್) ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 27-06-2015 ರಂದು ರಾತ್ರಿ 10.15 ಗಂಟೆ ಸುಮಾರಿಗೆ ಸೇಡಂ ಠಾಣಾ ಹದ್ದಿಯಲ್ಲಿರುವ ಸೇಡಂ ಪಟ್ಟಣದ ಭವಾನಿ ನಗರದಲ್ಲಿರುವ ಫಿರ್ಯಾದಿ ಮನೆ ಮುಂದಿನ ರಸ್ತೆಯ ಮೇಲೆ ಚಾಸಾ.1 ಮತ್ತು 7 ನೇದ್ದವರು ಬಾಯಿ ಮಾತಿನ ಜಗಳವಾಡುತ್ತಿದ್ದಾಗ, ಜಗಳ ಬಿಡಿಸಲು ಬಂದ ಚಾಸಾ.1 ನೇದ್ದವರು ಜಗಳ ಬಿಡಿಸಲು ಬಂದಾಗ, ಆಗ ಆರೋಪಿತನಾದ ನೀನು ಚಾಸಾ.1 ನೇದ್ದವನಿಗೆ ಏ ರಂಡಿ ಮಗನೇ ರಾಜಾ ಈ ಜಗಳಕ್ಕೆ ಮೂಲ ಕಾರಣ ನೀನು ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ.504 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ.1 ನೇದ್ದವನಿಗೆ ವಿನಾಕಾರಣ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದು, ಕೈಯಿಂದ ಹೊಡಿಬಡಿ ಮಾಡಿದ್ದಲ್ಲದೇ, ಅಲ್ಲಿಯೇ ಬಿದ್ದಿದ್ದ ಕಲ್ಲಿನಿಂದ ಎಡ, ಬಲಗಣ್ಣಿನ ಹುಬ್ಬಿನ ಮೇಲೆ ಹೊಡೆದು ರಕ್ತಗಾಯ ಪಡಿಸಿದ್ದು, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ.323, 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ANAND

12/01/22